**ಓಎಸ್ ನಂಃ 82/2019** **ಪಿಡಬ್ಲೊಃ 02**

**ಸಾಕ್ಷಿಗೆ ದಿನಾಂಕ 06-10-2023 ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ.ಡಿ.ಡಿ. ವಕೀಲರಿಂದ**

ದಾವಾ ಆಸ್ತಿಯ ಪೂರ್ವಕ್ಕೆ ಪ್ರತಿವಾದಿಯ ಖುಲ್ಲಾ ಜಾಗೆ ಇದ್ದು, ಪಶ್ಚಿಮಕ್ಕೆ ಪ್ರತಿವಾದಿಯ ಮನೆ ಇದ್ದು, ದಕ್ಷಿಣಕ್ಕೆ ವಾದಿಯ ಮನೆ ಇರುತ್ತದೆ, ಉತ್ತರಕ್ಕೆ ವಾದಿಯ ಇನ್ನೊಂದು ಮನೆ ಇರುತ್ತದೆ.

ದಾವಾ ಆಸ್ತಿ ವಾದಿಗೆ ಹೇಗೆ ಬಂತು ಎಂದು ನಾನು ದಾಖಲಾತಿಗಳನ್ನು ನೋಡಿದ್ದು, ಅದರ ಅಳತೆ ಎಷ್ಟಿದೆ ಎಂದು ನಾನು ದಾಖಲಾತಿಗಳಲ್ಲಿ ನೋಡಿರುವುದಿಲ್ಲ.

ವಾದಿಯು ನನ್ನ ಸಂಬಂಧಿಕನಾಗಬೇಕು ಎಂದರೆ ಸರಿ. ನಮ್ಮ ಮನೆ ದಾವಾ ಆಸ್ತಿಯ ಹತ್ತಿರ ಇರುತ್ತದೆ ಎಂದು ತೋರಿಸಲು ನಾನು ಯಾವುದೇ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ.

ವಾದಿಯು ಮನೆ ಕಟ್ಟಲು ಪರವಾನಗಿ ಪಡೆದಿದ್ದರ ಬಗ್ಗೆ ನಾನು ದಾಖಲಾತಿಗಳನ್ನು ನೋಡಿರುತ್ತೇನೆ. ವಾದಿಯು ಎಷ್ಟು ವಿಸ್ತೀರ್ಣದಲ್ಲಿ ಮನೆಯನ್ನು ಕಟ್ಟಿರುತ್ತಾನೆ ಎಂದು ನನಗೆ ನಿಖರವಾಗಿ ಹೇಳಲು ಆಗುವುದಿಲ್ಲ. ಸಾಕ್ಷಿಯು ಮುಂದುವರೆದು ವಾದಿಯು ತನ್ನ ಎರಡು ಪ್ಲಾಟಗಳಲ್ಲಿ ಮನೆ ಕಟ್ಟಿ, ಸ್ವಲ್ಪ ಜಾಗೆಯನ್ನು ಕಂಪೌಂಡ ಕಟ್ಟಲು ಬಿಟ್ಟಿರುತ್ತಾರೆ. ಉತ್ತರ ದಿಕ್ಕಿನಲ್ಲಿ ಸ್ವಲ್ಪ ಜಾಗೆಯನ್ನು ಕಂಪೌಂಡ ಕಟ್ಟಲು ವಾದಿಯು ಬಿಟ್ಟಿರುತ್ತಾನೆ. ಖಾಲಿ ಜಾಗೆ ಬಿಟ್ಟಿರುವ ಪ್ಲಾಟ ನಂಬರ ನನಗೆ ನಿಖರವಾಗಿ ಹೇಳಲು ಬರುವುದಿಲ್ಲ. ಸಾಕ್ಷಿಯು ಮುಂದುವರೆದು ಸದರಿ ಪ್ಲಾಟ ನಂಃ 202 ಅಥವಾ 203 ಆಗಿರಬಹುದು ಎಂದು ನುಡಿಯುತ್ತಾರೆ.

ಪ್ರತಿವಾದಿಯು ಪ್ಲಾಟ ನಂಃ 202 ರ 5 x 25 ಮೀಟರ ಜಾಗೆಯಲ್ಲಿ ಅತಿಕ್ರಮಣ ಮಾಡಿಕೊಂಡು ಪ್ಲಾ ನಂಃ 6 ರಲ್ಲಿ ಮನೆಯನ್ನು ಕಟ್ಟಿದ್ದರ ಬಗ್ಗೆ ನಾನು ಯಾವುದೇ ದಾಖಲಾತಿಗಳನ್ನು ನೋಡಿರುವುದಿಲ್ಲ, ಸಾಕ್ಷಿಯು ಮುಂದುವರೆದು, ಸದರಿ ಪ್ಲಾಟಗಳನ್ನು ಅಳತೆ ಮಾಡಲು ಬಂದಾಗ ನನಗೆ ಆ ವಿಷಯ ಗೊತ್ತಾಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಪ್ಲಾಟಗಳನ್ನು ಅಳತೆ ಮಾಡಲು ಶೆಳ್ಳಗಿ ಪಂಚಾಯತಿಯಿಂದ ಗ್ರಾಮ ಪಂಚಾಯ ಅಭಿವೃದ್ಧಿ ಅಧಿಕಾರಿಗಳು ಬಂದಿದ್ದರು. ಸದರಿಯವರು ಸುಮಾರು 5 ವರ್ಷಗಳ ಹಿಂದೆ ಅಳತೆ ಮಾಡಲು ಬಂದಿದ್ದರು. ಅಳತೆ ಮಾಡಿದ ನಂತರ ನಾನು ದಾಖಲಾತಿಗಳಿಗೆ ನಾನು ಸಹಿಯನ್ನು ಮಾಡಿರುತ್ತೇನೆ. ನಾನು ಸಹಿ ಮಾಡಿದ ದಾಖಲಾತಿಯಲ್ಲಿ ಏನು ಬರೆದಿತ್ತು ಎಂದು ಓದಿ ತಿಳಿದುಕೊಂಡಿರುವುದಿಲ್ಲ.

ನಾನು ವಾದಿಗೆ ಸಂಬಂಧಿಕನಾಗಿದ್ದು, ಈ ದಾವೆಗೆ ಅನುಕೂಲವಾಗುವಂತೆ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ವಾದಿಯ ಯಾವುದೇ ಜಾಗೆಯನ್ನು ಅತಿಕ್ರಮಣ ಮಾಡಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ.

ವಾದಿಯ ಎರಡು ಪ್ಲಾಟಗಳ ಸಂಖ್ಯೆ ನನಗೆ ಗೊತ್ತಿದ್ದು, ಅವುಗಳ ಅಳತೆ ನಿಖರವಾಗಿ ಹೇಳಲು ಆಗುವುದಿಲ್ಲ. ಸಾಕ್ಷಿಯು ಮುಂದುವರೆದು ಸದರಿ ಪ್ಲಾಟಗಳು ದೊಡ್ಡವು ಮತ್ತು ಸಣ್ಣವು ಇದ್ದು, ಪ್ಲಾಟ ಅಳತೆ 18 x 15 ಅಡಿ ಇರಬಹುದು ಎಂದು ನುಡಿಯುತ್ತಾರೆ. ಪ್ಲಾಟಗಳ ಅಳತೆ ಪೂರ್ವ ಪಶ್ಚಿಮ ಮತ್ತು ಉತ್ತರ ದಕ್ಷಿಣ ಎಷ್ಟಿದೆ ಎಂದು ನನಗೆ ನಿಖರವಾಗಿ ಹೇಳಲು ಆಗುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ. ಹೇ . ಕೇ. ಸರಿ ಇದೆ.

ಸಿವಿಲ್ ನ್ಯಾಯಾಧೀಶರು, ಚಿತ್ತಾಪೂರ.

<u>ಸಾಕ್ಷಿಗೆ ದಿನಾಂಕ **06-10-2023** ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು</u>

<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ.ಡಿ.ಡಿ. ವಕೀಲರಿಂದ</u>

ನಾನು ಸುಮಾರು 14 ವರ್ಷಗಳಿಂದ ಫೋಟೋಗ್ರಾಫರ ಆಗಿ ಕೆಲಸ ಮಾಡುತ್ತಿದ್ದೇನೆ. ನಾನು ಸ್ವಂತ ಫೋಟೋ ಸ್ಟುಡಿಯೋವನ್ನು ನಡೆಸುತ್ತೇನೆ. ನಾನು ಫೋಟೋ ಸ್ಟುಡಿಯೋ ಹೊಂದಿದ್ದೇನೆಂದು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನನ್ನ ಫೋಟೋ ಸ್ಟುಡಿಯೋಕ್ಕೆ ಜಿಎಸಟಿ ಹೊಂದಿರುವುದಿಲ್ಲ. ನಾನು ಮೂಲ ಹೇರೂರ ಗ್ರಾಮದವನಾಗಿರುತ್ತೇನೆ.

ನಾನು ವಾದಿಯು ತೋರಿಸಿದ ಜಾಗೆಯ ಛಾಯಾಚಿತ್ರಗಳನ್ನು ತೆಗೆದಿರುತ್ತೇನೆ. ಸದರಿ ಜಾಗೆ ಯಾರಿಗೆ ಸಂಬಂಧಿಸಿದ್ದು ಎಂದು ನನಗೆ ಗೊತ್ತಿರುವುದಿಲ್ಲ.

ನಾನು ಯಾವುದೇ ಜಾಗೆಗೆ ಹೋಗಿರುವುದಿಲ್ಲ ಮತ್ತು ಯಾವುದೇ ಛಾಯಾಚಿತ್ರಗಳನ್ನು ನಾನು ತೆಗೆದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ವಾದಿಯ ಮಾತನ್ನು ಕೇಳಿ ಈ ದಾವೆಗೆ ಅನುಕೂಲವಾಗುವಂತೆ ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಿಪಿ-15 ರಿಂದ ನಿಪಿ-21 ರ ಛಾಯಾಚಿತ್ರಗಳನ್ನು ನಾನು ತೆಗೆದಿರುವುದಿಲ್ಲ ಎಂದರೆ ಸರಿಯಲ್ಲ. ವಾದಿ ನನ್ನ ದೊಡ್ಡಪ್ಪ ಇರುತ್ತಾರೆ ಎಂದರೆ ಸರಿ. ನಾನು ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ. ಹೇ . ಕೇ. ಸರಿ ಇದೆ.

ಸಿವಿಲ್ ನ್ಯಾಯಾಧೀಶರು, ಚಿತ್ತಾಪೂರ.